ರೋಟರಿ ಮೈಸೂರು ಮಿಡ್‌ಟೌನ್
rotary MYSORE MID-TOWN
Club No. 15742 RI Dist. 3181

Rotary Opens Opportunities

# ABOUT US

MIDTOWN WEEKLY BULLETIN

TEAM Jataayu
Loyalty-Sacrifice-Service

| Volume : 40 | Issue : 04 | 29/07/2020 | Pages : 06 |
|---|---|---|---|

## ಸಿಂಗಾಪುರದಲ್ಲಿ ಕನ್ನಡದ ಕಂಪು

## ವಿಜಯ ರಂಗ ಪ್ರಸಾದ್ ಎನ್. ಎಸ್. ಇಂದಿನ ಅತಿಥಿ

**Profile Educational Qualification**

- Master of Computer applications (MCA) from SJCE, Mysore
- Bachelor of Science (Bsc) in Physics, Mathematics and Computer Science , University of Mysore

**Professional Qualification**

- Project management Professional (PMP)
- Agile certified professional (ACP)
- Certificate in Practical Counselling – Academy of Human Development Singapore
- ACI-SMU FICS Financial Market certificate – Singapore Management University
- Essential of Tarde Finance certificate - Singapore Management University

**Profile – Professional**

**Director, Central of Excellence Change and Target Model, ING Bank N.V., Singapore**

24+ years of progressive expertise in project delivery, leadership, stakeholder management, people management and problem solving for Banking and Financial institution

**Other work experiences**

- FinansBank Amsterdam, The Netherlands
- DataCons Pvt Ltd, Bangalore

**Profile – Volunteer Organization**

**Kannada Sangha (Singapore) – 10 years of Service in different roles**



Part of various administrative and event planning services for not-for-profit organizations. Managed a wide range of development activities, facilitated and spearhead on strategic planning, directions on many fund raising initiatives.

- President – June 2015 to March 2019
- Vice President – June 2011 to June 2013
- Treasurer – June 2009 to June 2011
- Executive committee Member – June 2007 to June 2009

**Other Volunteer Work**

- Member of Indian activity Executive committee (IAEC), Kampong Chai Chee CC

**Extra-Curricular Activities**

- Cricket - Played for Mysore Cricket Club, ACC Netherlands, Marina Cricket Club Singapore
- Badminton
- Photography



**Rtn. Raghu M. S was the speaker at Rotary Club of Mysore East on July 22, 2020. The topic was Believe in your Belief**

**Rtn. Mallikarjun Swamy has been conferred "Diploma in Management" by the ICFAI University, Tripura. Congrats Malli.**



ರೋಟರಿ ಮೈಸೂರು ಮಿಡ್‌ಟೌನ್
rotary MYSORE MID-TOWN
Club No. 15742 RI Dist. 3181

ABOUT US

Rotary Opens Opportunities



# The Victory –Kargil Vijay Divas

## Joint Virtual meeting with Rotary Mysore



Col. Mahendra Babu

On 23 rd July, 2020 a joint virtual meeting was organized by Rotary Mysore & Rotary Mysore Midtown.

The meeting was called to order by President Rtn. Manjesh (Rotary Mysore) & President Rtn. Aiyanna (Rotary Midtown Mysore), almost 80 members of both clubs were present , Rotractors of Rotary Mysore and guests of both the club attended the meeting .

Col. Mahendra Babu who was at the frontiers was the guest and speaker on the occasion of Kargil Vijay Divas. Col Mahendra Babu gave first hand information of Kargil war, one of the most recent and infamous example of high-altitude warfare i.e wars that are fought on mountainous terrain. Such wars are considered more dangerous due to the rough terrain and natural habitat. The Kargil War or the Kargil Conflict took place between May 3 and July 26, 1999, in the Kargil district of Kashmir and elsewhere along the Line of Control (LOC).

Col. Mahendra Babu said that India launched 'Operation Vijay' to clear the Kargil sector of infiltration by Pakistani soldiers and Kashmiri militants on the Indian side of the Line of Control. Since 1999, every year July 26 is celebrated as the Kargil Vijay Diwas to commemorate the success of Operation Vijay. While the 60-day long war resulted in the loss of several lives on both the sides, India eventually won the war by regaining control of all the previously held territory, re-establishing the status quo ante-bellum. Kargil was a military, political and diplomatic victory for India and it observed the 21st anniversary of Kargil Vijay Divas on Sunday 26th July 2020 in honor of the men who lost their lives in the war.

During the Q&A session Col. Babu suggested that one way of showing our respect to soldiers is -during soldier's short holiday period when they return to their home town recognize them and help in their office works so that they have some utility time with their families, also help the widows of the martyrs by supporting in their livelihood.

I was asked to propose the vote of thanks, meeting ended with everyone attending the meeting feeling very proud of our Indian Army who did a great job battling in extreme conditions and protecting our country. We all thank our Army the sacrifices they do so that all our families can sleep peacefully.

A big salute to all of our Army Brave Hearts.

Rtn. Mallikarjun Swamy.
Club Service Director.

# COMMUNITY SERVICE PROJECTS









**4 months grocery kits were distributed 15 teachers of Obali Vidyalaya, an NGO at Kudalore, Kollegal Taluk on 23rd July, 2020. Community Service Director Rtn. Jaykumar led from the front. Obali Vidyalaya situated amidst the forests at the Karnataka and Tamilnadu border. It is run by an ex service man Mr. Gangadhar. This organisation apart from running a school where students study from LKG to PUC, provides vocational training like sewing to women, youth are motivated to join army, awareness is given regarding conservation of forest, sportsman ship developed among people and people are made self reliant. The teachers had not received their salary due to covid crisis.**

# My Unforgettable Moments in Rotary...

**ನೆನಪಿನಂಗಳದಿಂದ ......**



1984ರ ಆ ದಿನ ರೋಟೇರಿಯನ್ ಎಸ್. ಕೆ. ನಟರಾಜ್ ಅವರ ಮನೆಗೆ ಭೇಟಿ ನೀಡಿದಾಗ ಅವರಿಂದ ರೋಟರಿ ಬಗ್ಗೆ ಅರಿವು ಮತ್ತು ರೋಟರಿ ಮಿಡ್‌ಟೌನ್ ಸದಸ್ಯನಾಗಲು ಆಹ್ವಾನ ದೊರೆಯಿತು. ಕಾಲೇಜು ದಿನಗಳಂದಲೂ ರಾಷ್ಟ್ರೀಯ ಸ್ವಯಂ ಸೇವಾ ಯೋಜನೆ (ಎನ್.ಎಸ್.ಎಸ್.) ಮುಂತಾದ ಸೇವಾ ಕಾರ್ಯಗಳಲ್ಲಿ ತೊಡಗಿದ್ದ ನನಗೆ ರೋಟರಿ ಸಂಸ್ಥೆಯ ಮೂಲಕ ಮತ್ತೊಮ್ಮೆ ಸೇವೆಗಳಲ್ಲಿ ತೊಡಗಿಕೊಳ್ಳುವ ಅವಕಾಶ ದೊರೆಯಿತು. ಆಹ್ವಾನವನ್ನು ಸ್ವೀಕರಿಸಲು ಮನಸ್ಸಿನಲ್ಲಿ ಏಕೋ ಅಳುಕು. ಏಕೆಂದರೆ ಅಂದಿನ ಆ ಕ್ಷೇತ್ರದ ದಿಗ್ಗಜರಾದ ರೋ. ಫರೂಕ್ ಇರಾನಿ, ಆರ್. ವಾಸುದೇವ ಮೂರ್ತಿ, ಆರ್. ಗುರು ಇವರ ಬಗ್ಗೆ ಇದ್ದ ಗೌರವ ಹಾಗೂ ಮಿಡ್‌ಟೌನ್‌ನ ರೋ. ನಂ. ಮಧ್ವರಾವ್, ಡಾ. ಕನಕರಾಜ್, ಡಾ. ಶಾಸ್ತ್ರೀದ್ವಯರು ಹಾಗೂ ಇನ್ನಿತರ ಮಹನೀಯರೊಂದಿಗೆ ಕಲೆತು, ಕಲಿತು, ಸೇವೆ ಮಾಡುವುದಾಗಿತ್ತು. ನನ್ನ ಮಿಡ್‌ಟೌನ್ ಪ್ರವೇಶ ಅಂದಿನ ಅಧ್ಯಕ್ಷ ಡಾ. ಎಸ್. ಆರ್. ಕನಕರಾಜ್ ಅವರ ಸಾರಥ್ಯದಲ್ಲಿ ದಿನಾಂಕ 13-3-1985ರಂದು ಮೈಸೂರಿನ ಬಾಲಭವನದ ಸಭಾಂಗಣದಲ್ಲಿ ಮಾಜಿ ಗವರ್ನರ್ ರೋ. ಭೂಷಣ್‌ರವರಿಂದ ಸದಸ್ಯತ್ವ ಸ್ವೀಕಾರ. ಅಂದಿನ ರೋಟರಿಯ ಧ್ಯೇಯ ವಾಕ್ಯ, ಸೇವೆಯ ಹೊಸ ಜಗತ್ತನ್ನು ಅನ್ವೇಷಿಸಿ ``Discover a New World of Service'' ನನ್ನಂತಹ ಯುವಕನಿಗೆ ಹೇಳಿ ಮಾಡಿಸಿದಂತಿತ್ತು. ಮಿಡ್‌ಟೌನ್ ದಿಗ್ಗಜರ ಒಡನಾಟ ನನಗೆ ಭಯ, ಪುಳಕ ಹಾಗೂ ಮನಃಸ್ಥೈರ್ಯ ತುಂಬಿತೆಂದರೆ ಅತಿಶಯೋಕ್ತಿಯಾಗಲಾರದು. 1986-87ರಲ್ಲಿ ರೋ. ಇಮ್ತಿಯಾಜ್. ಅವರ ಅಧ್ಯಕ್ಷತೆಯಲ್ಲಿ ನನಗೆ ರೋಟರಿಯ ಮೊದಲು ಜವಾಬ್ದಾರಿ "ಹಾಜರಾತಿ ಸಮಿತಿ" ಮುಖ್ಯಸ್ಥ. ಅಂದು ರೋಟರಿಯಲ್ಲಿ ಕಡ್ಡಾಯ ಹಾಜರಾತಿಯ ನಿಯಮವಿತ್ತು, ನಾನು ಎಂದಿನಂತೆ ನಿಷ್ಪಕ್ಷಪಾತವಾಗಿ ನಾಲ್ಕು ಜನ ಹಿರಿಯ ಸದಸ್ಯರಿಗೆ ಹಾಜರಾತಿಯ ನೋಟೀಸ್ ನೀಡಿದಾಗ ಒಂದು ರೀತಿಯ ಆಶ್ಚರ್ಯ ಹಾಗೂ ಪ್ರಶಂಸೆ. ಅದೇ ವರ್ಷ ಮಿಡ್‌ಟೌನ್‌ನ ಬಹುದಿನಗಳ ಕನಸಾದ ಅಂಗವಿಕಲ ಮಕ್ಕಳ ಶಾಲೆ ತೆರೆಯಲು ಒಂದು ಬೃಹತ್ ಹಣ ಸಂಗ್ರಹಣಾ ಯೋಜನೆ ರೋ. ನಂ. ಮಧ್ವರಾವ್ ಅವರ ಅಧ್ಯಕ್ಷತೆಯಲ್ಲಿ- "ತಾರಾ ಮೇಳ" (Star Nite) ನಗರದ ಮಾನಸಗಂಗೋತ್ರಿಯ ಬಯಲು ಮಂದಿರದಲ್ಲಿ ಆಯೋಜನೆಯಾಯಿತು. ಆ ಕಾರ್ಯಕ್ರಮದ ಸಂಪೂರ್ಣ ಪ್ರಚಾರ ಹೊಣೆಯನ್ನು ನನಗೆ ವಹಿಸಲಾಯಿತು. 29ರ ಪ್ರಾಯದ ನಾನು ಹುರುಪು ಹಾಗೂ ಉತ್ಸಾಹದಿಂದ ನಗರದೆಲ್ಲೆಡೆ ಆಟೋಗಳಲ್ಲಿ ಪ್ರಚಾರ ಮಾಡಿದೆ. ಹಾಗೂ ಹಗಲು ರಾತ್ರಿಯೆನ್ನದೆ ಭಿತ್ತಿಪತ್ರಗಳನ್ನು (Posters) ಅಂಟಿಸಿದೆ. ದುರಾದೃಷ್ಟವಶಾತ್ ಖ್ಯಾತ ತಾರೆ ಮಂಜುಳ ಅಂದೇ ನಿಧನ ರಾದ್ದರಿಂದ ಕಾರ್ಯಕ್ರಮ ಹಠಾತ್ ಒಂದು ದಿನ ಮುಂದೂಡಿಕೆಯಾಯಿತು. ಅಂದು ಕಾರ್ಯಕ್ರಮಕ್ಕೆ ಬಂದಿದ್ದ ಸ್ಟಾರ್ ನಟ ವಿಷ್ಣುವರ್ಧನ್ ಮರುದಿನ ಮದರಾಸಿನಲ್ಲಿ ಶೂಟಿಂಗ್‌ಗೆ ಪಯಣಿಸಿದರು. ಅಲ್ಲದೆ ಅಂದಿನ ಕಾರ್ಯಕ್ರಮಕ್ಕೆ ಮೈಸೂರು ಜಿಲ್ಲಾ ಪೋಲಿಸರು ರಕ್ಷಣೆ ನೀಡಲು ನಿರಾಕರಿಸಿದರು. ಈ ಸಂದಿಗ್ಧ ಸ್ಥಿತಿಯಲ್ಲಿ ಮಿಡ್‌ಟೌನಿಗರು ಎದೆಗುಂದದೆ ತಾವೇ ಕರ್ತವ್ಯ ನಿರ್ವಹಿಸಿ ಯಶಸ್ವಿಯಾಗಿದ್ದು ಈಗ ಇತಿಹಾಸ. ಇದು ನನ್ನ ಜೀವನದಲ್ಲಿ ಮರೆಯಲಾಗದ ಘಟನೆ. ಅದೇ ವರ್ಷ ಜಿಲ್ಲಾ ಅಸೆಂಬ್ಲಿಯನ್ನು ಯಶಸ್ವಿಯಾಗಿ ನಡೆಸಿದ ಗರಿಮೆ ಮಿಡ್‌ಟೌನಿನದು. ರೋಟರಿ ಜಿಲ್ಲೆ 318ರಲ್ಲಿ ಮಿಡ್‌ಟೌನ್‌ನ ಬಗ್ಗೆಯೇ ಪ್ರಶಂಸೆಯ ನುಡಿಗಳು. ಅದೇ ವರ್ಷ ಡಿಸೆಂಬರ್ 6ರಂದು ತುಮಕೂರಿನಲ್ಲಿ ನಡೆದ ನನ್ನ ವಿವಾಹಕ್ಕೆ ಇಡೀ ಮಿಡ್‌ಟೌನ್ ಸದಸ್ಯರು ಕುಟುಂಬ ಸಮೇತರಾಗಿ ಹಾಜರಾಗಿ, ಅಂದು ನಮ್ಮ ಕ್ಲಬ್ಬಿನಿಂದ ದೀಪಾವಳಿ ಪಟಾಕಿಗಳ ಮಾರಾಟದ ನಡುವೆ ಒಂದು ಕ್ರೇಟ್ ಪಟಾಕಿಯನ್ನು ಉಳಿಸಿ ತುಮಕೂರಿನಲ್ಲಿ ಸಿಡಿಸಿದ್ದು ಇಂದಿಗೂ ನನ್ನ ವಿವಾಹವನ್ನು 'ಪಟಾಕಿ ಮದುವೆ'ಯೆಂದೆ ನೆನಪಿಸುತ್ತಾರೆ. 1987-88ರಲ್ಲಿ ರೋ. ಡಾ. ಆರ್.ಎಂ. ಶಾಸ್ತ್ರಿಯವರ ತಂಡದಲ್ಲಿ ಜಂಟಿ ಕಾರ್ಯದರ್ಶಿಯಾಗಿ, ಅಂದಿನ ಅಂತಾರಾಷ್ಟ್ರೀಯ ರೋಟರಿ ಕಾರ್ಯಕ್ರಮವಾದ ಪಲ್ಸ್ ಪೋಲಿಯೋ ಯಶಸ್ವಿ ಪ್ರಾರಂಭವಾಯಿತು. ಹಾಗೂ ಅಂದು ಮೈಸೂರಿನ ಹೆಸರಾಂತ ಚೆಲುವಾಂಬ ಆಸ್ಪತ್ರೆಯಲ್ಲಿ ಖ್ಯಾತ ವೈದ್ಯರಾದ ಡಾ. ಕೌಲಗುಡ್ಡ ಅವರ ನೇತೃತ್ವದಲ್ಲಿ 900ಕ್ಕೂ ಮಿಕ್ಕ ಕುಟುಂಬಗಳಿಗೆ ಶಸ್ತ್ರ ಚಿಕಿತ್ಸೆಯ ಯಶಸ್ವಿ ಶಿಬಿರ ನಡೆಯಿತು. 1988-89ರ ರೋ. ಎಸ್.ಕೆ. ನಟರಾಜ್‌ರವರ ತಂಡದಲ್ಲಿ ಕ್ಲಬ್ ಸರ್ವೀಸ್ ನಿರ್ದೇಶಕನಾಗಿ ಕಾರ್ಯ ನಿರ್ವಹಿಸಿ ಅಂದು ಮಿಡ್‌ಟೌನ್ ರೋಟರಿ ಜಿಲ್ಲೆ 318ರಲ್ಲಿ ಮೊದಲ ಸ್ಥಾನ ಗಳಿಸಿದ್ದು ನಮಗೆಲ್ಲಾ ಹೆಮ್ಮೆಯ ವಿಚಾರ. ಅನಂತರ 1989-90ರಲ್ಲಿ ರೋ. ಓ. ಪ್ರತಾಪ್ ಕುಮಾರ್ ತಂಡದಲ್ಲಿ ಸಮುದಾಯ ಸೇವಾ ನಿರ್ದೇಶಕನಾಗಿ ಬನ್ನೂರು ರಸ್ತೆಯಲ್ಲಿರುವ ಗಳಗರ ಹುಂಡಿ ಗ್ರಾಮದಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದು ಹೆಮ್ಮೆಯ ವಿಚಾರ. 1991-92ರಲ್ಲಿ ಅಂದಿನ ಆಕಸ್ಮಿಕ ಅಧ್ಯಕ್ಷ ರೋ. ಎಂ.ಎಸ್. ರಘು ಅವರು ರೈಲಾ (Ryla) ಹಾಗೂ ಇನ್ನಿತರ ಕಾರ್ಯಕ್ರಮಗಳೊಂದಿಗೆ ಮತ್ತೊಮ್ಮೆ ಮಿಡ್‌ಟೌನ್‌ಗೆ ರೋಟರಿ ಜಿಲ್ಲೆಯಲ್ಲಿ ಪ್ರಥಮ



Induction to Rotary



ರೋಟರಿ ಮಿಡ್‌ಟೌನ್ ಮಸ್ತಳ್ಳಿ



ಕಲ್ಕತ್ತಾದಲ್ಲಿ ನಡೆದ ರೋಟರಿ ಸೆಂಟಿನಿಯಲ್ ಸಮಾವೇಶ

ಸ್ಥಾನ. ಅನಂತರ 1994-95ರಲ್ಲಿ ರೋ. ಡಿ. ಶ್ರೀನಾಥ್ ಅವರ ಅಧ್ಯಕ್ಷತೆಯಲ್ಲಿ ಮತ್ತೊಮ್ಮೆ ಜಂಟಿ ಕಾರ್ಯದರ್ಶಿಯಾಗಿ ಅಂದಿನ ಯಶಸ್ವಿ ಯೋಜನೆಯಾದ ವಿಶೇಷ ಮಕ್ಕಳ ಶಾಲೆಗೆ ಒಂದು ಮಿನಿ ಬಸ್ ನೀಡಿದ ಮೊದಲ ಅಂತಾರಾಷ್ಟ್ರೀಯ ವಿನಿಮಯ ಯೋಜನೆಯಲ್ಲಿ ಭಾಗಿ.

ಸುಮಾರು ಆರು ವರ್ಷಗಳ ಸತತ ಜವಾಬ್ದಾರಿಯ ಅನಂತರ ನನ್ನ ಸ್ವಂತ ಕಾರ್ಯ ಹಾಗೂ ಪಿಹೆಚ್.ಡಿ., ನಿಮಿತ್ತ ಯಾವುದೇ ಮುಖ್ಯ ಹೊಣೆಗಾರಿಕೆಯನ್ನು ಪಡೆಯಲಿಲ್ಲ.

2003-04 ಮಿಡ್‌ಟೌನ್ ಇತಿಹಾಸದಲ್ಲಿ ಕ್ರಾಂತಿಕಾರಿ ವರ್ಷವೆಂದರೆ ತಪ್ಪಾಗಲಾರದು. ರೋ. ಎಂ. ಎಸ್. ನಂದಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಾನು ಕ್ಲಬ್ಬಿನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದು ಹಾಗೂ ಇಡೀ ಮಿಡ್‌ಟೌನ್ ಒಂದು ತಂಡವಾಗಿ ರೋಟರಿ ಜಿಲ್ಲೆ 3180 ನಲ್ಲಿ ಒಂದು ದಾಖಲೆ ನಿರ್ವಹಿಸಿದ ವರ್ಷ. ಕನಸುಗಾರ ಅಧ್ಯಕ್ಷನಾದಾಗ ಒಂದು ಕ್ಲಬ್ ಏನೆಲ್ಲ ಸಾಧಿಸಬಹುದೆಂದು ರೋ. ನಂದಕುಮಾರ್ ಅವರಿಂದ ನೋಡಿ ಕಲಿಯುವುದು ಬಹಳಷ್ಟಿದೆ. ಅವರ ವರ್ಷದಲ್ಲಿ ದಿ ಬಿಗ್ ಫೈಟ್-ರೋಟರಿ ಅದಾಲತ್‌ನ ಉದ್ಘಾಟನೆ ಉಡುಪಿಯ ಪೇಜಾವರ ಮಠದ ಅಧೋಕ್ಷಜರಾದ ಪರಮ ಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀ ಪಾದಂಗಳವರಿಂದ ಆಯಿತು. ಅಂದಿನ ಹಣ ಸಂಗ್ರಹಣೆ ಯೋಜನೆಯಾದ "ಬಹುರಂಗ್" ನ ಯಶಸ್ಸು ಸದಾ ಮೈಸೂರಿಗರ ಹಾಗೂ ಮಿಡ್‌ಟೌನಿಗರ ಮನದಲ್ಲಿ ಅಚ್ಚಳಿಯದೆ ಉಳಿದಿದೆ. ಮೊದಲ ಬಾರಿಗೆ ನಮ್ಮ ಕುಟುಂಬದವರಿಂದ ಪ್ರಾಯೋಜಿತವಾದ ಉತ್ತಮ ಶಿಕ್ಷಕರಿಗೆ ನೀಡಲ್ಪಡುವ ರೋಟರಿ ಅಮರವಾಣಿ ಪ್ರಶಸ್ತಿ ಪ್ರಾರಂಭವಾಯಿತು. ಇದಲ್ಲದೆ ಆ ವರ್ಷ ನೆನಪಿನಲ್ಲಿ ಉಳಿಯಬಹುದಾದ ಯೋಜನೆಗಳೆಂದರೆ - ರಾಷ್ಟ್ರೀಯ ರೈಲಾ, ಅಗಸ್ತ್ಯ ಫೌಂಡೇಷನ್ ಸಹಯೋಗದೊಂದಿಗೆ ಮೈಸೂರಿನ ಕಲಾ ಮಂದಿರದಲ್ಲಿ ಮಕ್ಕಳ ಬೃಹತ್ ವಿಜ್ಞಾನ ವಸ್ತು ಪ್ರದರ್ಶನ, ರೋಟರಿ ಸುಪ್ರೀಂ ಪ್ರಶಸ್ತಿ ಪ್ರದಾನ, ವಿಶೇಷ ಮಕ್ಕಳಿಗಾಗಿ ಸಮ್ಮೇಳನ ಕಾರ್ಯಕ್ರಮ, ರೋಟರಿ ಮಹೋನ್ನತ ಕೈಗಾರಿಕೋದ್ಯಮಿ ಪ್ರಶಸ್ತಿ, ರೋಟರಿ ಮೋಟೋ ಜೋನ್ ಅದ್ವಿತೀಯ ಕ್ರೀಡಾಪಟು ಪ್ರಶಸ್ತಿ, ಮೈಸೂರಿನ ಬಂದಿಖಾನೆಯಲ್ಲಿ ಗಾಂಧಿ ಜಯಂತಿ ಆಚರಣೆ, ಅಂತಾರಾಷ್ಟ್ರೀಯ ಯುವಮೇಳ, ಮಿಡ್‌ಟೌನ್ ಮಸ್ತಳ್ಳಿ, ರೋ. ರಘು ಹಾಗೂ ರೋ. ಭಾನುಚಂದ್ರನ್ ಅವರಿಂದ 'ತಲುಪಲು ಕಲಿಸಿ' (Teach to Reach) ವೃತ್ತಿಮಾರ್ಗದರ್ಶನ, ಮೈಸೂರಿನಲ್ಲಿ ಮೊದಲ ಬಾರಿಗೆ ಹಾಸ್ಯಸಂಜೆ ಕಾರ್ಯಕ್ರಮ ಹಾಗೂ ಮೈಸೂರಿಗರ ಮನೆ ಮಾತಾಗಿರುವ "ರೋಟರಿ ನಮನ ಪ್ರಶಸ್ತಿ", ಸದಾ ಮಿಡ್‌ಟೌನಿಗರ ಹೆಮ್ಮೆಯಾಗಿದೆ.

2004-05ರ ಅಧ್ಯಕ್ಷ ರೋ. ಅಳಗಪ್ಪನ್ ಅವರ ನೇತೃತ್ವದಲ್ಲಿ ರೋಟರಿ ಮಿಡ್‌ಟೌನ್ ಅಕಾಡೆಮಿಯ ಯಶಸ್ವಿ ಚಾಲನೆ ಹಾಗೂ ರೋಟರಿ ಮಿಡ್‌ಟೌನ್‌ನ ರಜತ ಮಹೋತ್ಸವ ಸಂಭ್ರಮಾಚರಣೆ, ವಿಶೇಷ ಮಕ್ಕಳ ಒಲಂಪಿಕ್ಸ್ - ಬಾಂಧವ್ಯ, ನನ್ನ ನೆನಪಿನಲ್ಲಿದೆ.

2006-07 ಸುವರ್ಣ ಕರ್ನಾಟಕ ಸಂಭ್ರಮಾಚರಣೆಯ ವರ್ಷ. ನಾನು ಕ್ಲಬ್ಬಿನ ಸಾರಥ್ಯ ವಹಿಸಿದ್ದು ನನ್ನ ಭಾಗ್ಯ ವಿಶೇಷ. ನನ್ನ ಪದಗ್ರಹಣ ಸಮಾರಂಭವೇ ಒಂದು ವಿಶೇಷ ಹಾಗೂ ಅವಿಸ್ಮರಣೀಯ. ಮಾಜಿ ಗವರ್ನರ್ ಎ.ಎಸ್.ಎನ್. ಹೆಬ್ಬಾರ್‌ರಿಂದ ಪದಗ್ರಹಣ ಹೊಂದಿ ಅವರ ಕನ್ನಡ ವಾಗ್ಝರಿಯ ಸಂದೇಶದೊಂದಿಗೆ ಕನ್ನಡ ವರ್ಷಾಚರಣೆ ಆರಂಭ. ಆ ವರ್ಷ ಮಿಡ್‌ಟೌನ್‌ಗೆ ಒಬ್ಬ ಒಳ್ಳೆಯ ಸಂಪಾದಕರಾಗಿ ಡಾ. ಪ್ರಹ್ಲಾದ್ ಆಗಮನ. ಇದೇ ವರ್ಷ ಕ್ಲಬ್ ಬುಲೆಟಿನ್‌ಗೆ ಒಂದು ವಿಶೇಷ ರಂಗು. ಇಡೀ ವರ್ಷ ಕನ್ನಡ ನಾಡು, ನುಡಿ ಸಾಧಕರ ಪರಿಚಯದ ಮೂಲಕ ಮಿಡ್‌ಟೌನ್‌ನಲ್ಲಿ ಕನ್ನಡದ ಕಂಪು ಹಾಗೂ ಜಿಲ್ಲೆಯಲ್ಲಿ ಮೊದಲ ಸ್ಥಾನ ಪಡೆದ ಹೆಗ್ಗಳಿಕೆ ಡಾ. ಪ್ರಹ್ಲಾದ್‌ರವರದು. ಇಡೀ ವರ್ಷ RACE (Rotary Academy for Creative Excellance) ಅಡಿಯಲ್ಲಿ ರೋ. ರಘು ಹಾಗೂ ರೋ. ಭಾನುಚಂದ್ರನ್‌ರವರಿಂದ ಕೊಳ್ಳೇಗಾಲದಿಂದ ಕುಂದಾಪುರದವರೆಗೆ ವೃತ್ತಿ ಮಾರ್ಗದರ್ಶನ. ಹಲವಾರು ಲಕ್ಷಗಳಿಗೂ ಮೀರಿ ಎಸ್.ಎಸ್.ಎಲ್.ಸಿ. ಮಕ್ಕಳು ಹಾಗೂ ಶಿಕ್ಷಕರಿಗೆ ನಡೆಯಿತು. ಅನಂತರ ಈ ತಂಡಕ್ಕೆ ನನ್ನ ಹಾಗೂ ರೋ. ನಂದಕುಮಾರರ ಪ್ರವೇಶ ಅವಿಸ್ಮರಣೀಯ. ಆ ವರ್ಷ ನಡೆದ ಮತ್ತೊಂದು ಯಶಸ್ವಿ ಕಾರ್ಯಕ್ರಮ ಕ್ವಿಟ್ ಇಂಡಿಯಾ ಚಳುವಳಿಯ 64ನೇ ವರ್ಷಾಚರಣೆ. ಈ ಸಂದರ್ಭದಲ್ಲಿ ಖ್ಯಾತ ಕಾನೂನು ತಜ್ಞರಾದ ಡಾ. ಸಿ.ಕೆ.ಎನ್. ರಾಜಾ ಹಾಗೂ ಹೆಸರಾಂತ ರಾಜ್ಯಶಾಸ್ತ್ರ ತಜ್ಞರಾದ ಡಾ. ಹೆಚ್. ಎಂ. ರಾಜಶೇಖರ್ ಅವರುಗಳಿಂದ ಉಪನ್ಯಾಸ. ಮತ್ತೊಂದು ನೆನಪಿನಲ್ಲಿಡಬಹುದಾದ ಕಾರ್ಯಕ್ರಮ "ಎದೆ ತುಂಬಿ ಹಾಡುವೆನು" ಕಾರ್ಯಕ್ರಮದ ಯಶಸ್ವಿ ಮಕ್ಕಳಿಂದ "ಸುವರ್ಣ ಗಾನ ಸುಧೆ". ಶ್ರೀಯುತ ರಾಜು ಅನಂತಸ್ವಾಮಿಯವರಿಂದ ಪ್ರಶಸ್ತಿ ಪ್ರದಾನ. ಮೊಟ್ಟ ಮೊದಲ ಬಾರಿಗೆ ಡಾ. ರವೀಂದ್ರನಾಥ್ ನೇತೃತ್ವದಲ್ಲಿ C.P.R. ನ ಯಶಸ್ವಿ ಚಾಲನೆ. ಜೆ.ಎಸ್.ಎಸ್. ದಂತ ವೈದ್ಯ ಕಾಲೇಜಿಗೆ ರೋ. ರಾಮ್‌ಕಿ ಮಾರ್ಗದರ್ಶನದಲ್ಲಿ ಚಾಲಿತ ದಂತ ಚಿಕಿತ್ಸಾ ವಾಹನ ಸಮರ್ಪಣೆ, ವಾಚಕರ ವಾಣಿ ಕಾರ್ಯಾಗಾರ, ಮೊದಲ ಬಾರಿಗೆ ರೋಟರಿ ಶ್ರಮಜೀವಿ ಪ್ರಶಸ್ತಿ ಪ್ರದಾನ, ಖಂಒಂಖ ಸಹಯೋಗದೊಂದಿಗೆ ಬುಡಕಟ್ಟು ಜನಾಂಗದ ಯುವಕರಿಗೆ THADIENDAMOL ಕಾರ್ಯಕ್ರಮ, All India Tennis Tournament (Nagaraj Tennis Academy) ಸಹಯೋಗದೊಂದಿಗೆ, ಹೆಚ್.ಡಿ. ಕೋಟೆ ಹಾಗೂ ಕೆ.ಆರ್. ನಗರ ರೋಟರಿ ಸಂಸ್ಥೆಗಳ ಸಹಯೋಗದೊಂದಿಗೆ ಬೃಹತ್ ಆರೋಗ್ಯ ಮೇಳ ಹಾಗೂ ರೋ. ರಾಕೇಶ್ ಬಾಬು ಅವರ Rockline 150 ಕಾರ್ಟೂನ್‌ಗಳು ಕೆಲವು ನೆನಪಿನಲ್ಲಿರುವ ಕಾರ್ಯಕ್ರಮಗಳು ನಡೆದವು.




Rtn. Nandakumar's 'Lagaan' board

ಅನಂತರದ ವರ್ಷಗಳಲ್ಲಿ ರೋ. ಸುಂದರ್‌ರಾಜ್, ರೋ. ಮಹೇಶ್ ಮೂರ್ತಿ, ರೋ. ಕೆ.ಎನ್. ಶ್ರೀನಿವಾಸನ್, ರೋ. ರಾಘವೇಂದ್ರ, ರೋ. ವಿಶ್ವನಾಥ್, ರೋ. ಭಾನುಚಂದ್ರನ್,


ಬಹುರಂಗ್

ರೋ. ವೆಂಕಟೇಶ್, ರೋ. ಉಮೇಶ್, ರೋ. ನರೇಂದ್ರಬಾಬು, ರೋ. ಹರೀಶ್, ರೋ. ಡಾ. ಪ್ರಹ್ಲಾದ್, ತಂಡದವರಿಂದ ಹತ್ತು ಹಲವಾರು ಕಾರ್ಯಗಳಲ್ಲ ಭಾಗಿ. ಆ ವರ್ಷಗಳ ಕಾರ್ಯಕ್ರಮಗಳನ್ನು ಅವರಿಂದಲೇ ಕೇಳೋಣ. ಇದಲ್ಲದೆ ಕಳೆದ ಮೂವತ್ತೈದು ವರ್ಷಗಳಲ್ಲಿ ಎಲ್ಲ ರೋಟರಿ ಜಿಲ್ಲಾ ಸಮಾವೇಶ, ಬ್ಯಾಂಕಾಕ್‌ನಲ್ಲಿ ನಡೆದ ರೋಟರಿ ಅಂತಾರಾಷ್ಟ್ರೀಯ ಸಮಾವೇಶ ಹಾಗೂ ಈ ವರ್ಷ ಫೆಬ್ರುವರಿಯಲ್ಲಿ ಕಲ್ಕತ್ತಾದಲ್ಲಿ ನಡೆದ ರೋಟರಿ ಸೆಂಟನಿಯಲ್ ಸಮಾವೇಶದಲ್ಲಿ ಭಾಗಿಯಾಗಿ ನನ್ನನ್ನು ಒಬ್ಬ ಜವಾಬ್ದಾರಿಯುತ ರೋಟೇರಿಯನ್ನನ್ನಾಗಿ ಮಾಡಿದ ಮಿಡ್‌ಟೌನ್‌ಗೆ ಸದಾ ಋಣಿ.

ಸುವರ್ಣ ಗಾನ ಸುಧೆ ಕಾರ್ಯಕ್ರಮ



ನನ್ನ ಲೇಖನವನ್ನು ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಹೇಳಿದಂತೆ

**ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।**
**ಕಾರ್ಯತೇ ಹ್ಯವಶಃ ಕರ್ಮಃ ಸರ್ವಃ ಪ್ರಕೃತಿಜೈರ್ಗುಣೈಃ ॥**

(ಅಧ್ಯಾಯ – ೦೩, ಶ್ಲೋಕ – ೦೫)

(ಯಾವನೂ ಒಂದು ಕ್ಷಣ ಕೂಡಾ ಏನೂ ಮಾಡದೆ ತೆಪ್ಪಗಿರುವುದು ಸಾಧ್ಯವಿಲ್ಲ. ಪ್ರತಿಯೊಬ್ಬನೂ ಪ್ರಕೃತಿಯ ಗುಣಗಳಿಂದ ಅರಿವಿಲ್ಲದೆಯೇ (ಭಗವಂತನ ಅಧೀನವಾಗಿ) ಕರ್ಮ ಮಾಡುತ್ತಾನೆ.) ಈ ಮೂಲಕ ನನ್ನ ಲೇಖನವನ್ನು ಸಮಾಪ್ತಿ ಮಾಡುತ್ತೇನೆ.

Rtn. Dr. M.N. Bhemeesh
Joined Rotary on 13th March 1985
President during the year 2006-2007

# CORONA FILES.....

## ಬ್ಯೂಟಿಫುಲ್ ಮನಸುಗಳು

ಒಂದು ಕ್ಲಾಸ್ ರೂಮ್ ನಲ್ಲಿ ಸುಮಾರು ವಿದ್ಯಾರ್ಥಿಗಳಿದ್ದರು. ಅವರಲ್ಲಿ ಒಬ್ಬ ಎದ್ದು ನಿಂತು ಪ್ರೊಫೆಸರ್ ಗೆ ಹೇಳಿದ ಸರ್ ನನ್ನ ತಂದೆ ನನ್ನ ಜನ್ಮ ದಿನಕ್ಕೆ ಒಂದು ದುಬಾರಿ ಗಡಿಯಾರವನ್ನು ಉಡುಗೊರೆಯಾಗಿ ಕೊಟ್ಟಿದ್ದರು. ಈ 5 ನಿಮಿಷದ ಬ್ರೇಕ್ ನಲ್ಲಿ ಅದನ್ನು ಇಲ್ಲಿಯೇ ಬಿಟ್ಟು ಹೊರಗೆ ಹೋಗಿದ್ದೆ, ಬಂದು ನೋಡಿದರೆ ಕಾಣುತ್ತಿಲ್ಲ. ಆಗ ಪ್ರೊಫೆಸರ್ ವಿಚಾರ ಮಾಡಲಾಗಿ ಈ ಹುಡುಗ ಹೊರಗೆ ಹೋಗಿ ಒಳಗೆ ಬರುವವರೆಗೆ ಕ್ಲಾಸ್ ರೂಮ್ ಒಳಗಿರುವ ಯಾವನೋ ಒಬ್ಬ ಕದ್ದಿರುತ್ತಾನೆ ಎಂದು ಊಹಿಸಿದರು.

ಎಲ್ಲಾ ವಿದ್ಯಾರ್ಥಿಗಳಿಗೆ ಎದ್ದು ನಿಲ್ಲಿಸಿ ತಮ್ಮ ತಮ್ಮ ಕರ್ಚೀಫಿನಿಂದ ತಮ್ಮ ಕಣ್ಣುಗಳನ್ನು ಕಟ್ಟಿಕೊಳ್ಳಲು ತಿಳಿಸಿದರು. ಒಬ್ಬೊಬ್ಬರನ್ನು ಮೈಮುಟ್ಟಿ ಹುಡುಕುತ್ತಾ ಬಂದಾಗ ಒಬ್ಬನ ಜೇಬಿನಲ್ಲಿ ಅದು ಸಿಕ್ಕಿತು. ಅದನ್ನು ಕಳೆದುಕೊಂಡ ವಿದ್ಯಾರ್ಥಿಗೆ ಒಪ್ಪಿಸಿ, ಎಲ್ಲರಿಗೂ ಕಣ್ಣಿನ ಬಟ್ಟೆ ತೆಗೆಯಲು ತಿಳಿಸಿದರು. ಎಂದಿನಂತೆ ಪಾಠ ಮುಂದುವರೆಯಿತು.

ಆದರೆ ಗಡಿಯಾರ ಕದ್ದ ವಿದ್ಯಾರ್ಥಿಯ ಮನದಲ್ಲಿ ಭಯ, ಆತಂಕ ಶುರುವಾಗಿತ್ತು. ಇಂದೋ ನಾಳೆಯೋ ನಾನು ಕಳ್ಳ ಎಂದು ಎಲ್ಲರ ಮುಂದೆ ಬಹಿರಂಗವಾಗಿ ವಿಷಯ ತಿಳಿಸುತ್ತಾರೆ. ಆಗ ನನ್ನ ಗತಿ ಏನಾಗಬೇಕು ಎಂದು ಆತಂಕದಿಂದಲೇ ಕ್ಲಾಸಿಗೆ ಬರುತ್ತಿದ್ದ. ಹೀಗೆ ದಿನಗಳು ಕಳೆದು, ತಿಂಗಳುಗಳು ಕಳೆದು, ವರ್ಷವೇ ಕಳೆದು ಹೋಯಿತು. ಆ ವಿಷಯ ಯಾರಿಗೂ ಗೊತ್ತಾಗಲಿಲ್ಲ. ಎಲ್ಲಾ ವಿದ್ಯಾರ್ಥಿಗಳು ಪರೀಕ್ಷೆ ಮುಗಿಸಿ ಕಾಲೇಜಿನಿಂದ ನಿರ್ಗಮಿಸಿ ಹೋದರು.

ಹಲವು ವರ್ಷಗಳ ನಂತರ ಗಡಿಯಾರ ಕದ್ದ ವಿದ್ಯಾರ್ಥಿ ದೊಡ್ಡ ಬಿಸಿನೆಸ್ ಮ್ಯಾನ್ ಆಗಿ ಒಳ್ಳೆಯ ಹೆಸರು ಮಾಡಿದ್ದ. ಮುಂದೆ ಒಂದು ದಿನ ಆ ಕಾಲೇಜಿನ ವಿದ್ಯಾರ್ಥಿಗಳ ರಿಯೂನಿಯನ್ ಕಾರ್ಯಕ್ರಮದ ಮುಖ್ಯ ಆಕರ್ಷಣೆಯಾಗಿ ಅದೇ ಹುಡುಗ ಕಾಲೇಜಿಗೆ ಬಂದ. ಆತ ನೇರವಾಗಿ ಅದೇ ಪ್ರೊಫೆಸರ್ ಹತ್ತಿರ ಬಂದು ಕಾಲಿಗೆ ನಮಸ್ಕರಿಸಿ ಚಿಕ್ಕ ದನಿಯಲ್ಲಿ ಹೇಳಿದ ಸರ್ ಇಂದು ನಾನು ಜೀವಂತವಾಗಿರಲು ನೀವೇ ಕಾರಣ. ನನ್ನ ಇವತ್ತಿನ ಈ ಸಾಧನೆಗೆ ನೀವು ಮಾತ್ರ ಕಾರಣ. ಆಗ ಆ ಪ್ರೊಫೆಸರ್ ಆಶ್ಚರ್ಯಚಕಿತರಾಗಿ ನಾನು ಹೇಗೆ ಕಾರಣ ಮಗು ಎಂದರು.

ಸರ್ ಅಂದು ನಾನು ಆ ಗಡಿಯಾರವನ್ನು ಕದ್ದ ವಿಷಯ ನೀವು ಯಾರಿಗೂ ಹೇಳಲಿಲ್ಲ ಬಹಿರಂಗಪಡಿಸಲಿಲ್ಲ. ನನ್ನ ಹೆಸರು ಬಹಿರಂಗವಾದ ದಿನ ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ನಿರ್ಧಾರ ಮಾಡಿದ್ದೆ. ಅದೆಷ್ಟು ದಿನ ಕಳೆದರೂ ನೀವು ಈ ವಿಷಯವನ್ನು ಬಹಿರಂಗಪಡಿಸಲಿಲ್ಲ. ಆದ್ದರಿಂದ ನಾನು ಅಂದೇ ನಿರ್ಧರಿಸಿದೆ. ಇನ್ನು ಜೀವನದಲ್ಲಿ ನಿಯತ್ತಾಗಿ ಬದುಕಬೇಕೆಂದು. ಈ ನನ್ನ ಬದಲಾವಣೆಗೆ ಅವಕಾಶ ಕಲ್ಪಿಸಿಕೊಟ್ಟಿದ್ದು ನೀವೇ. ಆದ್ದರಿಂದ ನೀವೇ ನನ್ನ ದೇವರು ಎಂದ.

ಪ್ರೊಫೆಸರ್ ಆಶ್ಚರ್ಯಚಕಿತರಾಗಿ ಹೌದೇ! ಆ ವಿದ್ಯಾರ್ಥಿ ನೀನೆಯೋ? ನನಗೂ ಗೊತ್ತಿರಲಿಲ್ಲ ಎಂದರು. ಆ ದಿನ ನಾನು ಎಲ್ಲಾ ವಿದ್ಯಾರ್ಥಿಗಳ ಕಣ್ಣನ್ನು ಕಟ್ಟಿಸಿ, ನಾನು ಕೂಡ ನನ್ನ ಕಣ್ಣುಗಳನ್ನು ಕಟ್ಟಿಕೊಂಡಿದ್ದೆ. ಏಕೆಂದರೆ ಕದ್ದಿರುವ ವಿದ್ಯಾರ್ಥಿ ಯಾರೇ ಆಗಿರಲಿ, ಅವನು ನನ್ನ ವಿದ್ಯಾರ್ಥಿಯೇ. ನನ್ನ ದೃಷ್ಟಿಕೋನದಲ್ಲಿ ನನ್ನ ಯಾವ ವಿದ್ಯಾರ್ಥಿಯೂ ಕೆಳಮಟ್ಟದಲ್ಲಿ ಗುರುತಿಸಿಕೊಳ್ಳಬಾರದು. ಹೀಗಾಗಿ ನನಗೂ ಇವತ್ತೇ ತಿಳಿಯಿತು ಆ ವಿದ್ಯಾರ್ಥಿ ನೀನೇ ಎಂದು.

ಎದುರಿಗೆ ನಿಂತ ವಿದ್ಯಾರ್ಥಿಯ ಕಣ್ಣಾಲಿಗಳು ತುಂಬಿ ಹರಿಯತೊಡಗಿತ್ತು. ಮತ್ತೊಮ್ಮೆ ಗುರುಗಳ ಪಾದಕ್ಕೆ ಹಣೆ ಮುಟ್ಟಿ ನಮಸ್ಕರಿಸಿ ಈ ನಿಮ್ಮ ಕ್ಷಮಾ ಗುಣದಿಂದ ನಾನು ಮತ್ತೆ ಮನುಷ್ಯನಾಗಿರುವೆ ಎಂದ.

# Rotary Information



Harris and wife, Jean, at home in Chicago's South Side, December 1942. They resided there until Harris's death in 1947.



**Rtn. Paul Harris**
Founder



**Rtn. Holger Knaack**
RI President 2020-21



**Rtn. Rtn. M. Ranganath Bhat**
District Governor 2020-21



**Rtn. Aiyanna A.N**
President 2020-21



**Rtn. Veeresh**
Secretary 2020-21



**Rtn. Prahlad K A**
Editor 2020-21

## Wedding Anniversary



Rtn. Vivek Shyamrao Sangli
30th July



Rtn. Jaykumar . N.
3rd Aug

## Happy Birthday



Rtn. Narendra Babu
31st July



Rtn. Ashok Yadav. K.A.
2nd Aug



Rtn. Naveen Chand
2nd Aug

**Next Week's Meeting**
**Joint club meeting with Rotary Mangalore Metro - INSIGHT INTO ROTARY OPENS OPPORTUNITIES**

**Speaker : DG Rtn. Ranganath Bhat**

5th July 2020
Wednesday

Virtual Meeting

6.30 pm
onwards

**Good decisions don't just happen.**

**Ask yourself these 4 questions:**




1. Is it the TRUTH
2. Is it FAIR to All Concerned?
3. Will it build GOODWILL and Better Friendships?
4. Will it be BENEFICIAL to All Concerned?



Aboutus In-house Magazine Published by
Rtn. Veeresh, Hon. Secretary
Rotary Mysore Midtown, JLB Road, Mysore - 570024

Editorial Board: Rtn. Dr. K.A Prahlad,
Rtn. Ravindra Babu,
Rtn. Mallikarjuna Swamy,
Rtn. Bhaskar Sainik